


ಧಾರವಾಡದ ಸಾಧನಕೇರಿಯಲ್ಲಿ
ಕವಿ ದ.ರಾ. ಬೇಂದ್ರೆ ಅವರ ಮನೆ

# ಧಾರ್ವಾಡ ಅಂದ್ರ...

'ಧಾರ್ವಾಡದಾಗ ಎಲ್ಲೇ ನಿಂತು ಕಲ್ಲು ಒಗುದ್ರೂ ಸಾಹಿತಿಗಳ ಮನೀ ಮ್ಯಾಗ ಬೀಳ್ತದ' ಅಂತ ಮಾತೇ ಐತ್ರಿ. ಆದಂತೂ ಖರೇ ಬಿಡ್ರಿ. ಅದ್ರ ಜೊತಿಗೆ ಇಲ್ಲಿನ ತಿಂಡಿ ತಿನಿಸು ಕೂಡ ಫೇಮಸ್ ಆಗಾವ್ರಿ. ಚಹಾ ಅಂದ್ರ ಸಾಕು ಜೀವಾ ಬಿಡೂ ಮಂದಿ ಇಲ್ಲಿನವರು. ಧಾರ್ವಾಡ ಪೇಢ, ಗಿರ್ಮಿಟ್, ಬಸಪ್ಪನ ಖಾನಾವಳಿನಾಗ ರೊಟ್ಟಿ ಊಟ, ಒಂದಕ್ಕೊಂದ ಮಸ್ತ್ ಇರ್ತೇತಿ...



■ ನಳಿನಿ ಟಿ. ಭೀಮಪ್ಪ

ಮೊನ್ನಿ ಮಂಗ್ಳೂರು ಕಡೀ ಗೆಳತಿ ನಂಬರ್ ಹಚ್ಚಿದ್ದುರಿ. 'ಚಾ ಆತೇನ್ವಾ' ಅಂತ ಕೇಳೂತ್ಲೆ, 'ನಮಗೆ ಚಹಾ ಅಷ್ಟು ರೂಢಿಯಿಲ್ಲ ಮಾರಾಯಿತಿ, ಎದ್ದ ಕೂಡಲೇ ನಮಗೆ ದೋಸೆ, ಇಡ್ಲಿ ಈ ತರಹ ಏನಾದರೂ ತಿನ್ನುವುದಕ್ಕೆ ಬೇಕು, ನೀವು ಚಹಾದ ಜೋಡಿ ಬಿಸ್ಕಿಟ್ಟು ತಿಂತೀರಲ್ಲ, ಅದೆಲ್ಲ ನಮಗೆ ಸರಿಬರೋದಿಲ್ಲ' ಅಂದ್ಲು. 'ನೋಡ್ವಾ, ಮುಂಜೇಲೇ ಚಹಾದ ಜೋಡೀ ಬಿಸ್ಕೀಟು, ಸಂಜೀಕೆ ಚಾದ ಜೋಡೀ ಚೂಡಾ, ಉಂಡೀ ಇಂಥವೆಲ್ಲ ಬೇಕೇ ಬೇಕು ನಮ್ ಧಾರ್ವಾಡ ಮಂದಿಗೆ' ಅಂತ ಹೇಳಿದ್ಮ್ಯಾಗ ಗಪ್ಪಾದ್ಲು.

ಅದೇನೋ ನೋಡ್ರಿ ಚಹಾ ಅಂದ್ರ ಸಾಕು ಜೀವಾ ಬಿಡೂ ಮಂದಿ. ಊಟಾ, ನಾಷ್ಟಾ ಸರಿ ವ್ಯಾಳ್ಯಾಕ ಮಾಡ್ತಾರೋ ಇಲ್ಲೋ ಗೊತ್ತಿಲ್ಲ, ಹೊತ್ತಿಗ ನಾಕು ಸರ್ತೆ ಚಾ ಬೇಕಾರಿ. ಮನೀಗ ಯಾರಾರ ಬರ್ಲೀ, ನಡುಬರಕ ದಾರ್ಯಾಗ ದೋಸ್ತಾರಾ ಸಿಗಲೀ, ಒಂದೀಟು ಯಾರಾದ್ರೂ ಪರಿಚಯ ಆದ್ರೂ ಮುಗೀತು, ಚಾ ಕುಡಿಸ್ದೇ ಬಿಡಾಂಗಿಲ್ಲ. ಮನ್ಯಾಗ ಆಗ್ಲಿಲ್ಲ ಅಂದ್ರ, ಕಡೀಕ ಹೊಟೆಲ್‌ನಾಗಾದರೂ ಸರಿನೇ. ಇತ್ತೀಚಿಗಂತೂ ಗಲ್ಲಿಗ್ ನಾಕು ಚಾ ಪಾಯಿಂಟ್‌ಗಳು ಸಿಗತಾವ. ಕುಡುಕ್ರು ಕುಡಿಯೋಕ ನೆಪಾ ಹುಡುಕ್ದಂಗ, ಚಾ ಕುಡಿಯೋಕ ಮಂದಿ ಅದಕ್ಕಿಂತ ಭಾರೀ ಭಾರೀ ನೆಪ ಹುಡುಕ್ತಾರ್ರೀಪಾ. ನಮ್ಮ ಧಾರವಾಡದ ಸಾಹಿತಿ ಸಿದ್ದಲಿಂಗ ಪಟ್ಟಣಶೆಟ್ಟಿ ಮಾಸ್ತರ 'ಚಹಾದ ಜೊತಿ ಚೂಡಾದ್ಹಾಂಗ' ಅಂತ ಒಂದು ಅಂಕಣ ಬರಹಾನಾ ಬರದಿದ್ರು. ಬಿಸಿಬಿಸಿ ಚಾ ಕುಡ್ಕೋತ ಅದನ್ನ ಓದೂ ಮಜಾನಾ ಬ್ಯಾರೆ ಬಿಡ್ರಿ.

ನಮ್ಮೂರಾನ ಮಂದಿ, ಮಂದೀನ ಬಾಳ ಹಚ್ಕೋತಾರ, ನಮ್ಮೋರು ತಮ್ಮೋರು ಅಂತ ಬಾಳ ಕಾಳಜೀ ಮಾಡ್ತಾರ್ರೀ. ಸಾಹಿತಿಗಳು ಅಂತಿದ್ದಂಗೆ ನೆನ್ಪಾತು ನೋಡ್ರಿ. ಧಾರ್ವಾಡದಾಗ ಎಲ್ಲೇ ನಿಂತು ಕಲ್ಲು ಒಗುದ್ರೂ ಸಾಹಿತಿಗಳ ಮನೀ ಮ್ಯಾಗ ಬೀಳ್ತದ ಅಂತ ಮಾತೇ ಐತ್ರಿ. ಅದಂತೂ ಖರೇ ಬಿಡ್ರಿ. ನಮ್ಮ ಬೇಂದ್ರೇ ಅಜ್ಜಾರು, ನಮ್ಮ ಪಟ್ಟಣಶೆಟ್ಟಿ ಮಾಸ್ತರು ಅಂತ ಎಲ್ಲ ಸಾಹಿತಿಗೋಳ್ನೂ ನಮ್ಮವರೇ ಅಂತ ಹೇಳೋಮಟ್ಟಿಗೆ ಮಂದಿಗ ಜೀವ ರೀ. ಊರು ತುಂಬ ಸಾಲಿ, ಕಾಲೇಜು ತುಂಬಿ ತುಳುಕ್ತಾವ್ರೀ.

ಬಸವನ ಜೊತೀಗ ಬಾಲ ಅನ್ನೂ ಹಂಗ, ಕೋಚಿಂಗ್ ಸೆಂಟರ್‌ಗೊಳು, ಮೆಸ್‌ಗಳು, ಪಿಜಿಗಳು ಹೆಚ್ಚಾಗ್ಯಾವ. ಶಿಕ್ಷಣಕಾಶಿ ಅಂತ ಹೆಮ್ಮೆಯಿಂದ ಹೇಳ್ತಿವ್ರೀಪಾ. ಉತ್ತರ ಕರ್ನಾಟಕದ ಕಡೀ ಕಲ್ತಿರೋ ಮಂದೀನ ಕೇಳಿ ನೋಡ್ರಿ, ಧಾರ್ವಾಡದ ಕೃಷಿ ವಿಶ್ವವಿದ್ಯಾಲಯ, ಕರ್ನಾಟಕ